# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲು: 26 / ಪಿಡಬ್ಲು: 16

ದಿನಾಂಕಃ 20.03.2025

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾಗೇಂದ್ರ ಪಟ್ಟಣಶೆಟ್ಟಿ |
| ತಂದೆಯ ಹೆಸರು | : | ಪರಮಾನಂದ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಸಹಾಯಕ ಇಂಜನೀಯರ, ಪಿಡಬ್ಲುಡಿ, ಮುಂಡರಗಿ |
| ವಾಸ ಸ್ಥಳ | : | ಮುಂಡರಗಿ |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

1. ನಾನು ದಿಃ 16.07.2020 ರಿಂದ ಈಗಿನವರೆಗೂ ಮುಂಡರಗಿ ಪಿಡಬ್ಲುಡಿಯಲ್ಲಿ ಸಹಾಯಕ ಅಭಿಯಂತರರಾಗಿ ಕೆಲಸ ಮಾಡುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಚಾಸಾ-29 ರವರು ಈ ಪ್ರಕರಣದ ಗುನ್ನಾ ಜಾಗದ ನಕಾಶೆಯನ್ನು ತೆಗೆದು ಪೂರೈಸುವಂತೆ ಕೋರಿಕೆ ಪತ್ರವನ್ನು ನಮ್ಮ ಕಚೇರಿಗೆ ಸಲ್ಲಿಸಿದ್ದರು. ಈ ಪತ್ರವನ್ನು ನಮ್ಮ ಮೇಲಾಧಿಕಾರಿಗಳು ನನಗೆ ಕೊಟ್ಟಿರುತ್ತಾರೆ.

3. ದಿನಾಂಕಃ 25.04.2022 ರಂದು ಗುನ್ನಾ ಸ್ಥಳಕ್ಕೆ ಹೋಗಿದ್ದು, ಫ್ರಾಸಾ-14 ರವರು ಗುನ್ನಾ ಸ್ಥಳವನ್ನು ತೋರಿಸಿದ್ದು, ಅಲ್ಲಿ ಪರಿಶೀಲನೆ ಮಾಡಿ ಗುನ್ನಾ ಸ್ಥಳದ ನಕಾಶೆಯನ್ನು ತಯಾರಿಸಿರುತ್ತೇನೆ ಮತ್ತು ನಮ್ಮ ಮೇಲಾಧಿಕಾರಿಗಳ ಮೂಲಕ ಸದರಿ ಗುನ್ನಾ ನಕಾಶೆಯನ್ನು ಚಾಸಾ-29 ರವರಿಗೆ ಕಳಿಸಿಕೊಟ್ಟಿರುತ್ತೇನೆ. ಆ ಸಮಯದಲ್ಲಿ ನಾನೇ ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ಕೆಲಸ ಮಾಡುತ್ತಿದ್ದೆನು.

**4. ಈಗ ನಾನು ತಯಾರಿಸಿದ ನಕಾಶೆಯನ್ನು ನೋಡುತ್ತಿದ್ದು, ಅದನ್ನು ನಿಪಿ-26 ಎಂದು, ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು.**

**5. ನಿಪಿ-26 ರ ಕವರಿಂಗ್ ಲೆಟರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-27 ಎಂದು, ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು.**

**ಪಾಟಿ ಸವಾಲುಃ ಶ್ರೀ ಎಸ್.ವಿ. ಗ್ರಾಮಪುರೋಹಿತ, ಆರೋಪಿ ಪರ (CLADC) ವಕೀಲರಿಂದಃ**

6. ಸದರಿ ಪತ್ರವನ್ನು ನಮ್ಮ ಕಚೇರಿಯ ಇನ್ ವರ್ಡ್ ವಿಭಾಗದಲ್ಲಿ ಪಡೆದುಕೊಂಡಿರುತ್ತಾರೆ. ಸದರಿ ಪತ್ರಕ್ಕೆ ಇನ್ ವರ್ಡ್ ನಂಬರನ್ನು ಕೊಡುತ್ತಾರೆ.

7. ಪ್ರಾಸಾ-14 ರವರು ಘಟನಾ ಸ್ಥಳಕ್ಕೆ ಬರಬೇಕೆಂದು ನನಗೆ ಫೋನ ಮಾಡಿದ್ದರು. ನಿಪಿ-26 ರ ಮೇಲೆ ನಮ್ಮ ಕಚೇರಿಯ ಸೀಲ್ ಇರುವುದಿಲ್ಲ. ನಿಪಿ-27 ರ ಮೇಲೆ ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿರುವ ಬಗ್ಗೆ ಪದನಾಮದ ಹತ್ತಿರ ಐ.ಸಿ. ಎಂದು ನಮೂದು ಮಾಡಿರುವುದಿಲ್ಲ.

8. ನಾನು ಮತ್ತು ಪ್ರಾಸಾ-14 ಘಟನಾ ಸ್ಥಳಕ್ಕೆ ಹೋದಾಗ, ಬೇರೆ ಯಾರೂ ಅಲ್ಲಿ ಇರಲಿಲ್ಲ. ಸ್ಥಳದಲ್ಲಿ ಅರ್ಧ ತಾಸು ಇದ್ದೆವು. ಅಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುವುದಿಲ್ಲ.

9. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಪೋಲೀಸರಿಗೆ ಅನುಕೂಲವಾಗುವ ರೀತಿಯಲ್ಲಿ ನಾನು ಕಚೇರಿಯಲ್ಲಿ ಕುಳಿತು ನಿಪಿ-26 ಮತ್ತು ನಿಪಿ-27 ನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಆದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲು: 27 / ಪಿಡಬ್ಲು: 17

ದಿನಾಂಕ: 20.03.2025

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಡಿ. ಟೋಪಣ್ಣ ನಾಯಕ |
| ತಂದೆಯ ಹೆಸರು | : | ಹೊಸನ್ನ ನಾಯಕ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಶಾಖಾಧಿಕಾರಿ, ಹೆಸ್ಕಾಂ, ಡಂಬಳ |
| ವಾಸ ಸ್ಥಳ | : | ಮುಂಡರಗಿ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ನಾನು ಕಳೆದ 6 ವರ್ಷಗಳಿಂದ ಹೆಸ್ಕಾಂ ಡಂಬಳದಲ್ಲಿ ಶಾಖಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಚಾಸಾ-29 ರವರು ದಿ: 21.04.2022 ರಂದು, ದಿ: 04.03.2022 ರಂದು ಸಂಜೆ 06.00 ರಿಂದ ರಾತ್ರಿ 10.00 ರ ವರೆಗೆ ಅತ್ತಿಕಟ್ಟಿ ತಾಂಡಾದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿಯನ್ನು ಪೂರೈಸುವಂತೆ ನಮ್ಮ ಕಚೇರಿ ಪತ್ರವನ್ನು ಬರೆದಿದ್ದರು.

3. ಆ ಪ್ರಕಾರ, ನಾನು 110/33/11 ಕೆವಿ ಡಂಬಳ ಉಪ ಕೇಂದ್ರದಿಂದ ಬರುವ ಎಫ್-7 ಎನ್.ಜೆ.ವೈ. ಡೋಣಿ ಫೀಡರನಲ್ಲಿ ನಿರ್ವಹಿಸುತ್ತಿರುವ ಲಾಗ್ ಶೀಟನ್ನು ಪರಿಶೀಲನೆ ಮಾಡಿ, ದಿ: 04.03.2022 ರಂದು ಸಂಜೆ 06.00 ರಿಂದ ರಾತ್ರಿ 10.00 ರ ವರೆಗೆ ಅತ್ತಿಕಟ್ಟಿ ತಾಂಡಾದಲ್ಲಿ ವಿದ್ಯುತ್ ಸರಬರಾಜು ಇತ್ತು ಎಂದು ಮಾಹಿತಿಯನ್ನು ಪತ್ರದ ಮೂಲಕ ಪೂರೈಸಿರುತ್ತೇನೆ.

**4. ಈಗ ಸದರಿ ಪತ್ರವನ್ನು ನೋಡುತ್ತಿದ್ದು, ಅದನ್ನು ನಿಪಿ-28 ಎಂದು, ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು.**

**<u>ಪಾಟಿ ಸವಾಲುಃ ಶ್ರೀ ಎಸ್.ವಿ. ಗ್ರಾಮಪುರೋಹಿತ, ಆರೋಪಿ ಪರ (CLADC) ವಕೀಲರಿಂದಃ</u>**

5. ಡಂಬಳ ಶಾಖೆಯಲ್ಲಿ ಲಾಗ್ ಶೀಟ್ ಮತ್ತು ಕಂಪ್ಯೂಟರ ಜನರೇಟರ ಇಂಟರೆಪ್ಷನ ರೆಜಿಸ್ಟರ ಇವುಗಳನ್ನು ಇಡಲಾಗಿರುತ್ತದೆ. ನಾನು ನಿಪಿ-28 ರಲ್ಲಿ ಲಾಗ್ ಶೀಟ್ ಮತ್ತು ಕಂಪ್ಯೂಟರ ಜನರೇಟರ ಇಂಟರೆಪ್ಷನ ರೆಜಿಸ್ಟರ ಇವುಗಳನ್ನು ಪರಿಶೀಲನೆ ಮಾಡಿರುತ್ತೇನೆ ಎಂದು ನಮೂದು ಮಾಡಿರುವುದಿಲ್ಲ.

6. ಚಾಸಾ-29 ರವರು ಕಳಿಸಿದ ಪತ್ರವನ್ನು ನಮ್ಮ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪಡೆದುಕೊಂಡಿರುತ್ತಾರೆ. ಅದೇ ದಿನ ಸದರಿ ಪತ್ರವನ್ನು ನಾನು ಪಡೆದುಕೊಂಡಿರುತ್ತೇನೆ. ಈ ಬಗ್ಗೆ ನಾನು ನಿಪಿ-28 ರಲ್ಲಿ ನಮೂದು ಮಾಡಿರುವುದಿಲ್ಲ.

7. ನಾನು ಪರಿಶೀಲನೆ ಮಾಡದೇ, ಪೋಲೀಸರಿಗೆ ಅನುಕೂಲವಾಗಲಿ ಎಂದು ನಿಪಿ-28 ನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ – ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**